

ಮಣ್ಣು ಬಣ್ಣದ ಮಿಡತೆ

6ನೇ ಪುಟದಿಂದ

ಜೀವಜಗತ್ತಿನ ಎಲ್ಲಾ ಪ್ರಾಣಿ, ಕೀಟ, ಸಸ್ಯವರ್ಗಕ್ಕೂ ಅದ್ಭುತವಾದ ವರ್ಣ ಸಂಯೋಜನೆಯನ್ನು ಕೊಟ್ಟಿರುವ ಪ್ರಕೃತಿ, ಪಾಪದ ಮಿಡತೆ ಕುಲವನ್ನು ಮರೆಯಲು ಸಾಧ್ಯವೆ? ಹಾಗೇನೂ ಇಲ್ಲ. ನಮ್ಮ ಕಣ್ಣಿಗೆ ಕಾಣುವ ಮಿಡತೆಗಳು ಹಸಿರಾಗಿಯೋ, ಕಂದು ಬಣ್ಣದ್ದಾಗಿಯೋ ಅಥವಾ ಮಣ್ಣಿನ ಬಣ್ಣದ್ದಾಗಿ ಕಾಣಿಸುತ್ತದಾದರೂ, ಅಪಾರ ವರ್ಣವೈವಿಧ್ಯದ ಮಿಡತೆಗಳೂ ಇವೆ.

ಮುಖ್ಯವಾಗಿ ದಟ್ಟ ಕಾಡುಗಳಿರುವ ಆಫ್ರಿಕಾದ ದೇಶಗಳಲ್ಲಿ ಹಾಗೂ ಅಪಾರ ಮಳೆ ಸುರಿಸುವ ಅಮೆಜಾನ್ ಗೊಂಡಾರಣ್ಯದಲ್ಲಿ ಅದ್ಭುತ ಬಣ್ಣ ಮೇಳೈಸಿದ ಮಿಡತೆಗಳು ಇವೆಯಂತೆ. ಅವುಗಳಲ್ಲಿ ಗಾಢ ಹಳದಿ, ಗಾಢ ನೀಲಿ ಬಣ್ಣದ, ದಟ್ಟ ವರ್ಣಮಯ ದೇಹದ ಹಾಗೂ ತಿಳಿ ಗುಲಾಬಿ ಬಣ್ಣದ ರೆಕ್ಕೆಯ, ಕಪ್ಪು ಬಿಳಿ ಪಟ್ಟಿಯ ಹೇಸರಗತ್ತೆಯಂತಹ, ಹಳದಿ ಕಪ್ಪು ಪಟ್ಟಿಯ ನಮ್ಮ ಕಣಜದಂತಹ, ಸೈನಿಕ ಸಮವಸ್ತ್ರ ಧರಿಸಿದಂತಹ– ಹೀಗೆ ನಾನಾ ರೂಪದ ಮಿಡತೆಗಳು ಕಾಣಿಸುತ್ತವೆ.

ಬಹುಶಃ ಭಾರತದ ಮಿಡತೆಗಳಿಗೆ ಆ ಬಗೆ ಬಗೆ ಬಣ್ಣದ ಸೌಭಾಗ್ಯವಿದ್ದಂತಿಲ್ಲ. ಆದರೆ ಉತ್ತರ ಭಾರತದಲ್ಲಿ ಅಪರೂಪಕ್ಕೆ ಡಕ್ಟಿಲೋಟಮ್ ಬೈಕಲರ್ ವರ್ಗಕ್ಕೆ ಸೇರಿದ ಪೆಯಿಂಟೆಡ್ ಗ್ರಾಸ್‌ಹಾಪರ್ ಜಾತಿಯ ಗಾಢ ಹಳದಿ ಮತ್ತು ಗಾಢ ನೀಲಿಯ ಮಿಶ್ರಣದ ಚಿತ್ತಾರದ ಮಿಡತೆಗಳು ಅಲ್ಲಲ್ಲಿ ಕಾಣಿಸಿಕೊಳ್ಳುತ್ತವೆ.

## ಮಿಡತೆ ನಂಬರ್ 733

ಮಿಡತೆಗಳಲ್ಲಿ ಅಂದಾಜು 18 ಸಾವಿರದಷ್ಟು ವೈವಿಧ್ಯತೆ ಇದೆ ಎಂದು ಕೀಟಶಾಸ್ತ್ರಜ್ಞರು ಲೆಕ್ಕ ಹಾಕಿದ್ದಾರೆ. ಅವುಗಳಲ್ಲಿ ನಾವು ಅಲ್ಲಲ್ಲಿ ಬಯಲಿನಲ್ಲಿ ನೋಡಬಹುದಾದ ಸರಳ ಮಿಡತೆಗಳನ್ನು ಪಕ್ಕಕ್ಕಿಟ್ಟರೆ ಮಿಡತೆಗಳ ಲೋಕಲ್ಲಿಯೂ ಅನೂಹ್ಯ ರೀತಿಯ ಆಕರ್ಷಕ ಮಿಡತೆಗಳಿವೆ. ಅವುಗಳಲ್ಲಿ ರೈನ್‌ಬೋ (ಕಾಮನಬಿಲ್ಲಿನ)ಮಿಡತೆ ಒಂದು. ಅತೀ ಉಜ್ವಲ ಬಣ್ಣದ ಮೈಮೇಲೆ ನಾನಾ ಬಣ್ಣಗಳು ಒಟ್ಟಿಗೆ ಮೇಳೈಸಿದ ಈ ಜೀವಿ ಬಹುಶಃ ನಮ್ಮಲ್ಲಿ ಕಾಣಸಿಗದು.

ಇದಕ್ಕೂ ಮೀರಿದ ವರ್ಣ ವೈಭವದ ಮತ್ತೊಂದು ಜಾತಿಯನ್ನು ಕ್ಲೌನ್ ಮಿಡತೆ ಎಂದು ಗುರುತಿಸುತ್ತಾರೆ. ಉಳಿದಂತೆ ಅಂಕಲ್ ಸ್ಯಾಮ್ ಮಿಡತೆ, ಬಾರ್ಬರಾ ಪೋಲ್ ಮಿಡತೆ, ಪೆಯಿಂಟೆಡ್ ಮಿಡತೆ, ಪಿಕ್ಟರ್ಡ್ ಮಿಡತೆ– ಹೀಗೆ ನಾನಾ ವೈವಿಧ್ಯತೆಗಳಿವೆ. ಅಪಾರ ಗಾಢ ಬಣ್ಣವು ಮಿಡತೆಗಳ ರಕ್ಷಣಾ ಕವಚವಾಗಿದೆ. ಸಾಮಾನ್ಯವಾಗಿ ಅವುಗಳ ಆಹಾರವಾದ ಮಿಲ್ಕ್ ವೀಡ್ ಅಥವ ಅಂತಹದೇ ಸಸ್ಯಗಳಲ್ಲಿರುವ ಕಾರ್ಡಿಯಾಕ್ ಗ್ಲೈಕೋಸೈಡ್ ಎಂಬ ವಿಷದ ಸಂಗ್ರಹದಿಂದ ಮಿಡತೆಗಳ ದೇಹ ವಿಷಪೂರಿತವಾಗಿದೆ. ಅದನ್ನು ತಿನ್ನಬಯಸುವ ಬೇಟೆಗಾರ ಪ್ರಾಣಿಗಳಿಗೆ ಅವುಗಳ ಬಣ್ಣವೇ ಒಂದು ಎಚ್ಚರಿಕೆಯಾಗಿರುತ್ತದೆ.

ಇಂತಹ ವೈವಿಧ್ಯತೆಗಳ ನಡುವೆ ಬಹಳ ಅಪರೂಪದ ಮಿಡತೆ ಒಂದಿದೆ. ಅದರ ಹೆಸರು ನಂಬರ್ಡ್ ಗ್ರಾಸ್ ಹಾಪರ್. ಅದರ ಮೈಮೇಲೆ ನಮೂದಿಸಿದಂತೆ ಸ್ಪಷ್ಟವಾಗಿ ಕಾಣುವ ಸಂಖ್ಯೆಗಳಿಂದ ಅದಕ್ಕೆ ಈ ಹೆಸರು ಬಂದಿದೆ. ತಿಳಿ ನೀಲವರ್ಣದ ದೇಹದ ಮೇಲೆ ಸ್ಪಷ್ಟವಾಗಿ ಅಚ್ಚು ಹಾಕಿದಂತೆ ದಟ್ಟ ಕೆಂಪು ಬಣ್ಣದಲ್ಲಿ 733 ಎಂದು ಕಾಣಿಸುತ್ತದೆ. ಹಾಗೆ ಸೂಕ್ಷ್ಮವಾಗಿ ಗಮನಿಸಿದರೆ ತಲೆಯ ಮೇಲೆ, ದಪ್ಪ ಕಣ್ಣಿನ ಹಿಂಭಾಗದಲ್ಲಿ ಸ್ಪಷ್ಟವಾಗಿ ವೈ ಎಂಬ ಇಂಗ್ಲಿಷ್ ಅಕ್ಷರ ಕಾಣಿಸುತ್ತದೆ. ಹಾಗಾಗಿ ಈ ಮಿಡತೆಗೆ 733 ಎಂದು ಹೆಸರಿದ್ದರೂ ಕೆಲವರು ಪ್ರಸ್ತಾಪಿಸುವಾಗ ವೈ 733 ಎಂದು ಉದಾಹರಿಸುತ್ತಾರೆ.

ವಿಶೇಷವೆಂದರೆ ಇದೂ ಕೂಡ ಭಾರತದ ಮಿಡತೆ ಅಲ್ಲ ಎನ್ನುತ್ತಾರೆ. ಭಾರತದಲ್ಲಿ ಲಭ್ಯತೆಯ ಹೆಚ್ಚಿನ ವಿವರ ಗೊತ್ತಿಲ್ಲ. ಆದರೆ ಇಲ್ಲಿರುವ ಫೋಟೊ ಮಾತ್ರ ಮಂಗಳೂರಿನಲ್ಲಿಯೇ ತೆಗೆದದ್ದು. ಕೇವಲ ಆಫ್ರಿಕಾ ದೇಶದ ದಟ್ಟ ಕಾಡುಗಳಲ್ಲಿ ಇರುತ್ತದೆ ಎನ್ನಲಾದ ಈ ಮಿಡತೆ ನಂಬರ್ 733 ನಮ್ಮ ಮಂಗಳೂರಿನಲ್ಲಿ ಹೇಗೆ ಬಂತೋ ಗೊತ್ತಾಗುತ್ತಿಲ್ಲ. ಬಹುಶ ಅಂತರಾಷ್ಟ್ರೀಯ ವ್ಯಾಪಾರ ವಹಿವಾಟಿನ ಸರಕಿನ ಜೊತೆಯಲ್ಲಿ ಮೊಟ್ಟೆಗಳು ಬಂದಿರಬಹುದು; ಇಲ್ಲಿ ಮರಿಯಾಗಿ ಬೆಳೆದಿರಬಹುದು ಎನ್ನಿಸುತ್ತದೆ. ಈ ಮಿಡತೆ ಕಾಣಿಸಿದ ಕಾಡಿನ ಆಸುಪಾಸಿನಲ್ಲಿ ವಾರಗಟ್ಟಳೆ ಹುಡುಕಾಡಿದರೂ ಮತ್ತೊಂದೇ ಒಂದು ಇಂತಹ ನಂಬರ್ಡ್ ಮಿಡತೆ ಕಾಣಸಿಗಲಿಲ್ಲ!